Government of Karnataka

Deposition Sheet Form No. R.P. 57

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಸಿ.ಸಿ ನಂಬರ 925/2025

ಸಿ ಡಬ್ಲ್ಯೂ-12
ಪಿ ಡಬ್ಲ್ಯೂ-07

| | | |
|---|---|---|
| ಸಾಕ್ಷಿದಾರರ ಹೆಸರು | ಃ- | ಗದ್ದೆಪ್ಪ |
| ತಂದೆಯ ಹೆಸರು | ಃ- | ಸೋಮಪ್ಪ |
| ವಯಸ್ಸು | ಃ- | 65 ವರ್ಷ |
| ಉದ್ಯೋಗ | ಃ- | ಒಕ್ಕಲುತನ |
| ವಾಸಸ್ಥಳ | ಃ- | ಲಿಂಗಸುಗೂರು |

**ದಿ.15-05-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

***ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ.***

ಚಾ.ಸಾ-1 ಮತ್ತು ಆರೋಪಿತರ ಪರಿಚಯ ಇದೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲ. ಈ ಕುರಿತು ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

**(ಮಾನ್ಯ ಎಪಿಪಿ ಅವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲಿಗೆ ಅನುಮತಿ ಕೇಳಿರುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಎಪಿಪಿ ಅವರಿಂದ:-**

ದಿನಾಂಕ 23-03-2025 ರಂದು ಮದ್ಯಾಹ್ನ 2-30 ಕ್ಕೆ 1ನೇ ಆರೋಪಿ ಲಿಂಗಸುಗೂರಿನ ಅವರ ಮನೆಯಲ್ಲಿ ಜಗಳವಡು ದ್ವನಿ ಕೇಳಿ ನಾನು ಹೋಗಿರುತ್ತೇನೆ ಎಂದರೆ ಸರಿಯಲ್ಲ. 1ನೇ ಆರೋಪಿ ಊಟ ಮಾಡುತ್ತಿದ್ದಾಗ ಊಟ ಸರಿ ಇಲ್ಲ ಎಂದು ಸೂಳೆ ಎಂದು ಚಾ.ಸಾ-1 ರವರಿಗೆ ಬೈದು ನಿನ್ನ ತವರು ಮನೆಯಿಂದ 30-40 ಲಕ್ಷ ತೆಗೆದುಕೊಂಡು ಬಾ ಎಂದು ಹೊಡೆಬಡೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಚಾ.ಸಾ-1 ರವರಿಗೆ ಇಲ್ಲ-ಸಲ್ಲದ ಮಾತುಗಳು ಬೇಡ ಎಂದು ಹೇಳಿದ್ದಕ್ಕೆ ಅವರಿಗೆ 1ನೇ ಆರೋಪಿ ಬೂಟು ಮತ್ತು ಬೆಲ್ಟನಿಂದ ಬಲಗಡೆ ಬುಜಕ್ಕೆ ಮತ್ತು ಕುತ್ತಿಗೆಗೆ ಹೊಡೆದು ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

3. ದಿನಾಂಕ 24-03-2025 ರಂದು ಬೆಳಿಗ್ಗೆ 11-50 ಕ್ಕೆ 1ನೇ ಆರೋಪಿ ಮನೆಗೆ ಬಂದು ಲೇ ಸೂಳೇ ಇವತ್ತು ಎರಡರಲ್ಲಿ ಒಂದು ಆಗಬೇಕು ಎಂದು ಚಾ.ಸಾ-1 ರವರಿಗೆ ನಿನ್ನ ತವರು

ಮನೆಯಿಂದ ನಾನು ಕೇಳಿದಷ್ಟು ಹಣ ಬೇಕು ಇಲ್ಲವೆಂದರೆ ಮನೆ ಬಿಟ್ಟು ಹೋಗಬೇಕು ಎಂದು ಬೈದಿರುತ್ತಾನೆ ಎಂದರೆ ಸರಿಯಲ್ಲ. ಅದಕ್ಕೆ ಚಾ.ಸಾ-1 ರವರು ದಿನಂಪ್ರತಿ ಇದೇ ಮಾಡಲು ಆಗುವದಿಲ್ಲ ಎಂದು ತನ್ನ ತವರು ಮನೆಯವರಿಗೆ ಹೇಳುತ್ತೇನೆ ಎಂದು ಹೇಳಿದಾಗ ನನ್ನನ್ನು ಹೆದರಿಸುತ್ತಿಯಾ ಅವರನ್ನು ಕರೆಯಿಸಿ ಅವರನ್ನು ಸೇರಿಸಿ ತುಂಡು-ತುಂಡಾಗಿ ಕತ್ತರಿಸಿ ಬಿಡುತ್ತೇನೆ ಎಂದು ಬೈದು ಬೆಲ್ಟಿನಿಂದ ಬಲಗಡೆ ತಲೆಗೆ ಹೊಡೆದು ಒಳಪೆಟ್ಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆಗ ಚಾ.ಸಾ-1 ರವರು ಚೀರಾಡಿ ಹೊರಗಡೆ ಬಂದಾಗ 1ನೇ ಆರೋಪಿ ಲೇ ಸೂಳೆ ನೀನು ಎಲ್ಲಿಗೆ ಹೋಗುತ್ತಿಯಾ ಹೋಗು ನೀನು ಮನೆಗೆ ಬಂದರೆ ಪೆಟ್ರೋಲ್ ಹಾಕಿ ಸುಡುತ್ತೇನೆ ಎಂದು ಜೀವ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿಯಲ್ಲ. ನಂತರ ಚಾ.ಸಾ-1 ರವರಿಗೆ ಗಾಯಗಳಾಗಿದ್ದರಿಂದ ಲಿಂಗಸುಗೂರು ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಘಟನೆ ಬಗ್ಗೆ ಚಾ.ಸಾ-4 ರಿಂದ ೯ ರವರಿಗೆ ತಿಳಿಸಿರುತ್ತಾಳೆ ಎಂದರೆ ಸರಿಯಲ್ಲ. ನಾವು ಲಿಂಗಸುಗೂರು ಆಸ್ಪತ್ರೆಗೆ ಬಂದಿರುತ್ತೇವೆ ಎಂದರೆ ಸರಿಯಲ್ಲ. ಈ ಕುರಿತು ಚಾ.ಸಾ-1 ರವರು ಲಿಂಗಸುಗೂರು ಪೋಲಿಸ್ ಠಾಣೆಯಲ್ಲಿ ದೂರು ಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ. ಈ ವಿಷಯವನ್ನು ಚಾ.ಸಾ-1 ರವರು ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಇದೇ ರೀತಿ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿರಾಕರಿಸಿದ ಹೇಳಿಕೆಯನ್ನು ನಿ.ಪಿ-11 ಎಂದು ಗುರುತಿಸಲಾಯಿತು. ಚಾ.ಸಾ-1 ರವರು ಅವರ ಗಂಡನ ಮನೆಯಲ್ಲಿ ಸುಖವಾಗಿ ಜೀವನ ಮಾಡುತ್ತಿದ್ದಾರೆ. ಆದಕಾರಣ ನಿ.ಪಿ-11 ರಲ್ಲಿರುವ ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ ಶಿಕ್ಷೆಯಿಂದ ತಪ್ಪಿಸಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಶ್ರೀ ಎ.ಸಿ.ಪಿ ವಕೀಲರಿಂದ : -</u>**

ಏನೂ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ..
ಲಿಂಗಸಗೂರು.